RNU AIR DHARWAD

OCTOBER 26, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಐತಿಹಾಸಿಕ 201ನೇ ಕಿತ್ತೂರು ವಿಜಯೋತ್ಸವ:** ಜನೋತ್ಸವವಾಗಿ ಅದ್ದೂರಿ ಸಂಪನ್ನ; ಮುಖ್ಯಮಂತ್ರಿ ಭಾಗಿ.
- **ಪ್ರತಿ ನಿಮಿಷವೂ ಎಣಿಕೆಯಾಗುತ್ತದೆ:** ಧ್ಯೇಯದೊಂದಿಗೆ, ನಿಮ್ಹಾನ್ಸ್‌ನಲ್ಲಿ ವಿಶ್ವ ಪಾರ್ಶ್ವವಾಯು ದಿನಾಚರಣೆ.
- **ಮೈಸೂರಿನಲ್ಲಿ, ನವೆಂಬರ್ 3ರ ವರೆಗೆ,** 'ಇ–ತ್ಯಾಜ್ಯ ಸಂಗ್ರಹಣೆ' ವಿಶೇಷ ಅಭಿಯಾನ.
- **ಪ್ರಧಾನಮಂತ್ರಿ ಅವರಿಂದ,** ಇಂದು ಬೆಳಗ್ಗೆ 11 ಗಂಟೆಗೆ, ಮನ್ ಕಿ ಬಾತ್.

<><><>

**ಬೆಳಗಾವಿ ಜಿಲ್ಲೆ, ಬೈಲಹೊಂಗಲದ,** ಕಿತ್ತೂರು ರಾಣಿ ಚನ್ನಮ್ಮನವರ ಸಮಾಧಿ ಸ್ಥಳವನ್ನು, ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸುವಂತೆ, ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಕಿತ್ತೂರಿನ ಕೋಟೆ ಆವರಣದಲ್ಲಿ, ಮೂರು ದಿನಗಳ, 201ನೇ ಕಿತ್ತೂರು ವಿಜಯೋತ್ಸವದ, ಸಮಾರೋಪದಲ್ಲಿ ಅವರು ಮಾತನಾಡಿದರು. ಬೆಳಗಾವಿ ವಿಮಾನ ನಿಲ್ದಾಣಕ್ಕೆ, ಕಿತ್ತೂರು ರಾಣಿ ಚನ್ನಮ್ಮನವರ ಹೆಸರನ್ನು ನಾಮಾಂಕಿತಗೊಳಿಸಲು ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಕಿತ್ತೂರು ರಾಣಿ ಚನ್ನಮ್ಮ, 1824 ರ ಅಕ್ಟೋಬರ್ 23 ರಂದು, ಬ್ರಿಟಿ 'ರ ವಿರುದ್ಧ ಹೋರಾಡಿ ಜಯಗಳಿಸಿದರು ಎಂದರು.

<><><>

**ಡಿಸೆಂಬರ್ 8 ರಿಂದ,** ಬೆಳಗಾವಿಯ ಸುವರ್ಣ ಸೌಧದಲ್ಲಿ, ವಿಧಾನ ಮಂಡಲದ ಚಳಿಗಾಲದ ಅಧಿವೇಶನ ನಡೆಯಲಿದೆ ಎಂದು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಧಾರವಾಡದಲ್ಲಿ ಮಾತನಾಡಿದ ಅವರು, ಈ ಬಾರಿ ಸಹ, ಬುಧವಾರ ಮತ್ತು ಗುರುವಾರ, ಎರಡು ದಿನಗಳ ಕಾಲ, ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಹಾಗೂ ಕಂಡುಕೊಳ್ಳಬೇಕಿರುವ ಪರಿಹಾರೋಪಾಯಗಳ ಕುರಿತು, ಆಯಾ ಭಾಗದ ಶಾಸಕರಿಗೆ ಚರ್ಚಿಸಲು, ಅವಕಾಶ ನೀಡಲಾಗುವುದು ಎಂದರು.

<><><>

**ವಿಶ್ವ ಪಾರ್ಶ್ವವಾಯು ದಿನದ ಹಿನ್ನೆಲೆ,** ಪಾರ್ಶ್ವವಾಯು ಕುರಿತ, ಜಾಗೃತಿ ಕಾರ್ಯಕ್ರಮ, 'ಪ್ರತಿ ನಿಮಿ 'ವೂ ಎಣಿಕೆಯಾಗುತ್ತದೆ' ಎಂಬ ಧ್ಯೇಯದೊಂದಿಗೆ, ಬೆಂಗಳೂರಿನ, ರಾಷ್ಟ್ರೀಯ ಮನೋ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ – ನಿಮ್ಹಾನ್ಸ್‌ನಲ್ಲಿ ಜರುಗಿತು. ನಿಮ್ಹಾನ್ಸ್ ನಿರ್ದೇಶಕಿ ಡಾಕ್ಟರ್ ಪ್ರತಿಮಾ ಮೂರ್ತಿ, ವೈದ್ಯಕೀಯ ಅಧೀಕ್ಷಕ ಡಾಕ್ಟರ್ ಎಚ್.ಆರ್. ಅರವಿಂದ ಪಾಲ್ಗೊಂಡು, ಸೆರೆಬ್ರಲ್ ವೆನಸ್ ಥ್ರಂಬೋಸಿಸ್ ಅಪ್ಲಿಕೇಶನ್ ಸಿ.ವಿ.ಟಿ. ಮತ್ತು ಜನ ಜಾಗೃತಿ ಕರಪತ್ರವನ್ನು ಬಿಡುಗಡೆ ಮಾಡಿದರು. ಪಾರ್ಶ್ವವಾಯು ಪೀಡಿತರು ಹಾಗೂ ಅವರ ಆರೈಕೆದಾರರಿಗೆ, ವಿಶೇಷ ಶೈಕ್ಷಣಿಕ ಉಪಕ್ರಮವನ್ನು ಅಭಿವೃದ್ಧಿಪಡಿಸಲಾಗಿದೆ. ಸಿ.ವಿ.ಟಿ. ಅಪ್ಲಿಕೇಶನ್, ಹೆಪ್ಪು ರೋಧಕ ಚಿಕಿತ್ಸೆಯ ಅನುಸರಣೆ ಬಗ್ಗೆ ತಿಳಿವಳಿಕೆ, ನಿಯಂತ್ರಣದ ಕುರಿತು, ಜಾಗೃತಿ ಮೂಡಿಸಲು ವಿನ್ಯಾಸಗೊಳಿಸಲಾಗಿದೆ.

<><><>

**ಮೈಸೂರಿನ, ಸ್ವಾಮಿ ವಿವೇಕಾನಂದ ಯೂಥ್** ಮೂವಮೆಂಟ್ ಸಂಸ್ಥೆ, ಬೆಂಗಳೂರಿನ ಸಾಹಸ್ ಝೀರೊ ವೇಸ್ಟ್ ಸಂಸ್ಥೆ ಸಹಯೋಗದಲ್ಲಿ, ಇಲೆಕ್ಟ್ರಾನಿಕ್ ತ್ಯಾಜ್ಯಗಳ ವ್ಯವಸ್ಥಿತ ಸಂಗ್ರಹ ಹಾಗೂ ವೈಜ್ಞಾನಿಕ ವಿಲೇವಾರಿಗೆ, ಸಮುದಾಯದ ಸಹಭಾಗಿತ್ವದಲ್ಲಿ, ಆಂದೋಲನ ಕೈಗೊಂಡಿದೆ. ನವೆಂಬರ್ 3ನೇ ತಾರೀಖಿನ ವರೆಗೆ, ಇ–ವೇಸ್ಟ್ ಸಂಗ್ರಹಣೆ ಅಭಿಯಾನ ಜರುಗಲಿದೆ. ಹೆಚ್ಚಿನ ಪ್ರಮಾಣದ ಇ–ತ್ಯಾಜ್ಯವಿದ್ದಲ್ಲಿ, ಮೈಸೂರಿನಲ್ಲಿ, ಮನೆ ಬಾಗಿಲಿಗೆ ತೆರಳಿ ಸಂಗ್ರಹಿಸುವ ವ್ಯವಸ್ಥೆ, ಎಸ್.ವಿ.ವಾಯ್.ಎಂ. ಹೊಂದಿದೆ.ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಅಭಿಯಾನದ ಸಂಚಾಲಕ ಸಿ.ಕನಕರಾಜು.

<><><>

**ಬೆಳಗಾವಿ ಜಿಲ್ಲೆ, ಸವದತ್ತಿಯ,** ಶ್ರೀ ಯಲ್ಲಮ್ಮನ ಗುಡ್ಡಕ್ಕೆ, ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ, ಪದ್ಮಾವತಿ ಭೇಟಿ ನೀಡಿ, ನಿಗಮದ ವತಿಯಿಂದ, ವಾಣಿಜ್ಯ ಮಳಿಗೆಗಳ ಹಂಚಿಕೆ ಕುರಿತು, ದೇವಸ್ಥಾನ ಪ್ರಾಧಿಕಾರದ ಅಧಿಕಾರಿಗಳೊಂದಿಗೆ, ಚರ್ಚಿಸಿದರು. ಬಳಿಕ, ಉದ್ಯೋಗಿನಿ ಯೋಜನೆಯ ಫಲಾನುಭವಿಗಳು ಹಾಗೂ ವಿಮುಕ್ತ ದೇವದಾಸಿಯರೊಂದಿಗೆ, ಅವರು ಸಂವಾದ ನಡೆಸಿದರು.

<><><>

**‘ರಫ್ತು ಗುಣಮಟ್ಟದ ಮಾವು ಉತ್ಪಾದನೆ** ಹಾಗೂ ರಫ್ತು ವಿಧಾನಗಳು’, ಕುರಿತ ಎರಡು ದಿನಗಳ, ಮಾವು ಬೆಳೆಗಾರರ ಕಾರ್ಯಾಗಾರಕ್ಕೆ, ಧಾರವಾಡದಲ್ಲಿ ಚಾಲನೆ ದೊರೆತಿದೆ. ನಾಸಿಕ್‌ನ ಸಹ್ಯಾದ್ರಿ ಫಾರ್ಮ್ಸ್ ಅಧ್ಯಕ್ಷ ವಿಲಾಸರಾವ್ ಶಿಂಧೆ, ಆಲೂರು ವೆಂಕಟರಾವ್ ಭವನದಲ್ಲಿ, ಕಾರ್ಯಾಗಾರವನ್ನು ಉದ್ಘಾಟಿಸಿದರು. ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ, 200 ಕ್ಕೂ ಹೆಚ್ಚು ಜನ ಮಾವು ಬೆಳೆಗಾರರು, ಪಾಲ್ಗೊಂಡಿರುವ ಕಾರ್ಯಾಗಾರ, ಇಂದು ಸಂಜೆ ಸಮಾರೋಪಗೊಳ್ಳಲಿದೆ. ರಾಷ್ಟ್ರೀಯ ತೋಟಗಾರಿಕಾ ಮಿಷನ್, ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ಹಾಗೂ ತೋಟಗಾರಿಕೆ ಸಂಶೋಧನಾ ಸಂಸ್ಥೆ ಆಶ್ರಯದಲ್ಲಿ, ಮಾವು ಬೆಳೆಗಾರರ ಕಾರ್ಯಾಗಾರ ಆಯೋಜಿತವಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಬಳಿ ಹಳ್ಳಿಗೇರಿಯ, ವೃಕ್ಷಾಧಾರಿತ ಕೃಷಿ ಪ್ರವೀಣ, ಆರ್.ಜಿ.ತಿಮ್ಮಾಪೂರ.

<><><>

**ರಾಷ್ಟ್ರೀಯ ಸ್ವಯಂಸೇವಕ ಸಂಘದ,**ಸಂಸ್ಥಾಪನೆಯ ಶತಮಾನೋತ್ಸವ ಸಂಭ್ರಮದ ಹಿನ್ನೆಲೆ, ಬೆಂಗಳೂರಿನ ಅಖಿಲ ಭಾರತೀಯ ಸಾಹಿತ್ಯ ಪರಿಷತ್, ದಿ ಮಿಥಿಕ್ ಸೊಸೈಟಿಯಲ್ಲಿ, ‘ನೂರು ಹೆಜ್ಜೆ, ನೂರಾರು ಮಾತು’, ಮೌಲಿಕ ಕೃತಿಗಳ ಅವಲೋಕನ ಕಾರ್ಯಕ್ರಮ ಆಯೋಜಿಸಿದೆ. ಆರ್.ಎಸ್.ಎಸ್.ನ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ ಇಂದು ಬೆಳಗ್ಗೆ 10 ಗಂಟೆಗೆ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ, ರಾಜ್ಯ ಪ್ರಧಾನ ಕಾರ್ಯದರ್ಶಿ, ರಘುನಂದನ ಭಟ್ ನರೂರ, ಪಾಲ್ಗೊಳ್ಳಲಿದ್ದಾರೆ. ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಕವಯಿತ್ರಿ, ಶಾರದಾ ವಿ.ಮೂರ್ತಿ ಹಾಗೂ ಭಾರತ ಭಾರತಿ ಪುಸ್ತಕ ಸಂಪದದ, 2ನೇ ಕಂತಿನ ಸಂಪಾದಕ, ಚಿರಂಜೀವಿ ಅವರನ್ನು ಸನ್ಮಾನಿಸಲಾಗುತ್ತಿದೆ.

<><><>

**ಧಾರವಾಡದ, ಸಿ.ಎಸ್.ಐ. ವಾಣಿಜ್ಯ ಮಹಾವಿದ್ಯಾಲಯ,** ಸಂಸ್ಥಾಪನೆಯ ಸುವರ್ಣ ಮಹೋತ್ಸವ ಸಂಭ್ರಮದಲ್ಲಿದ್ದು, ಇಂದು ಬೆಳಗ್ಗೆ 10 ಗಂಟೆಗೆ, ಮಹಾವಿದ್ಯಾಲಯದ ಆವರಣದಲ್ಲಿ, ಹಿರಿಯ ವಿದ್ಯಾರ್ಥಿಗಳ ಸಮ್ಮೇಳನ ಆಯೋಜಿತವಾಗಿದೆ. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಶಿವಶಂಕರ ಅಮರಣ್ಣವರ, ಸಮ್ಮೇಳನ ಉದ್ಘಾಟಿಸಲಿದ್ದಾರೆ. ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ, ಪಿ.ಜಿ.ಎಂ.ಪಾಟೀಲ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ರೈಟ್ ರೆವರೆಂಡ್ ಮಾರ್ಟಿನ್ ಬೋರ್ಗಾಯಿ, ಸಾನಿಧ್ಯ ವಹಿಸಲಿದ್ದಾರೆ ಎಂದು, ಮಹಾವಿದ್ಯಾಲಯದ ಪ್ರಾಚಾರ್ಯೆ, ಕಮಲಾ ಢವಳೆ ತಿಳಿಸಿದ್ದಾರೆ.

<><><>

**ಹಿರಿಯ ಗ್ರಂಥಾಲಯ ವಿಜ್ಞಾನಿ,** ಜಿ.ಬಿ.ಹೊಂಬಳ, ಧಾರವಾಡದಲ್ಲಿ ನಿನ್ನೆ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ಕರ್ನಾಟಕ ರಾಜ್ಯ ಗ್ರಂಥಾಲಯ ಇಲಾಖೆಯ, ಸಿ.ಲಿಬ್ ತರಬೇತಿಯಲ್ಲಿ, ನುರಿತವರಾಗಿದ್ದ ಹೊಂಬಳ ಅವರು, ಗ್ರಂಥಾಲಯ ಹಾಗೂ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದರು. ಹೊಂಬಳ ಅವರ ನಿಧನಕ್ಕೆ, ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರು, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ, ಮನ್ ಕಿ ಬಾತ್ ಮೂಲಕ, ದೇಶ, ವಿದೇಶಗಳ ಭಾರತೀಯರೊಂದಿಗೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ಇದು, ಮನದ ಮಾತಿನ 127ನೇ ಆವೃತ್ತಿಯಾಗಿದೆ. ಮಹಿಂದಿ ಅವತರಣಿಕೆ ಬಳಿಕ, ಪ್ರಾದೇಶಿಕ ಭಾಷೆಗಳಲ್ಲಿಯೂ, ಈ ಕಾರ್ಯಕ್ರಮ, ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳಲ್ಲಿ ಪ್ರಸಾರವಾಗಲಿದೆ.

<><><>

**ರಾಜ್ಯದ ಗ್ರಾಮೀಣ ಪ್ರದೇಶದ,** ಅಂತರ್ಜಲಮಟ್ಟ ಸುಧಾರಿಸಲು, ಸಣ್ಣ ನೀರಾವರಿ ಇಲಾಖೆ, ‘ನೀರಿದ್ದರೆ ನಾಳೆ’, ಯೋಜನೆ ಸಿದ್ಧಪಡಿಸಿದೆ. ಮೊದಲ ಹಂತದಲ್ಲಿ, ರಾಜ್ಯದ 27 ತಾಲೂಕುಗಳ, 525 ಅತೀ ಹೆಚ್ಚು ಅಂತರ್ಜಲ ಬಳಸುವ ಗ್ರಾಮ ಪಂಚಾಯಿತಿಗಳಲ್ಲಿ, ‘ನೀರಿದ್ದರೆ ನಾಳೆ’ ಯೋಜನೆ, ಅನುಷ್ಠಾನಗೊಳ್ಳಲಿದೆ. ರಾಜ್ಯದ ಜಲ ಮೂಲಗಳ ಸಂರಕ್ಷಣೆ, ಅವುಗಳ ಮಹತ್ವದ ಕುರಿತು ಜನಜಾಗೃತಿ, ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ, ಜಲ ಮೂಲ ಸಂರಕ್ಷಣೆ, ಈ ಯೋಜನೆಯ ಮುಖ್ಯ ಉದ್ದೇಶ. ಕಲ್ಯಾಣ ಕರ್ನಾಟಕ ಭಾಗದ, 100ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, 200 ಕೋಟಿ ರೂಪಾಯಿ ವೆಚ್ಚದಲ್ಲಿ, ಅಂತರ್ಜಲ ಅಭಿವೃದ್ಧಿ ಯೋಜನೆ ರೂಪಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಐತಿಹಾಸಿಕ 201ನೇ ಕಿತ್ತೂರು ವಿಜಯೋತ್ಸವ;** ಜನೋತ್ಸವವಾಗಿ ಅದ್ದೂರಿ ಸಂಪನ್ನ; ಮುಖ್ಯಮಂತ್ರಿ ಭಾಗಿ.
- **ಪ್ರತಿ ನಿಮಿಷವೂ ಎಣಿಕೆಯಾಗುತ್ತದೆ;** ಧ್ಯೇಯದೊಂದಿಗೆ, ನಿಮ್ಹಾನ್ಸ್‌ನಲ್ಲಿ ವಿಶ್ವ ಪಾರ್ಶ್ವವಾಯು ದಿನಾಚರಣೆ.
- **ಮೈಸೂರಿನಲ್ಲಿ, ನವೆಂಬರ್ 3ರ ವರೆಗೆ,** ‘ಇ–ತ್ಯಾಜ್ಯ ಸಂಗ್ರಹಣೆ’ ವಿಶೇಷ ಅಭಿಯಾನ.
- **ಪ್ರಧಾನಮಂತ್ರಿ ಅವರಿಂದ,** ಇಂದು ಬೆಳಗ್ಗೆ 11 ಗಂಟೆಗೆ, ಮನ್ ಕಿ ಬಾತ್.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>